ಮೊದ್ಲು ವಾಸಿಯಾಗ್ಲಿ. ಹೊಸ ಶಾಲೆಯ ಎಂಟ್ರೆನ್ಸ್ ಪರೀಕ್ಷೆಗೆ ನಾಲ್ಕು ಹೊಸ ಪುಸ್ತಕ ತಂದಿದ್ದೇನೆ; ಹಗಲಲ್ಲಿ ನೀನ್ ಪ್ರಾಕ್ಟೀಸ್ ಮಾಡ್ಸು, ರಾತ್ರಿ ನಾನು ಮಾಡಿಸ್ತೀನಿ...'

ಕುಮುದಳಿಗೆ, ಕೋಪ ಮತ್ತು ಅಸಹಾಯಕತೆಯಿಂದ ಅಲ್ಲೇ ಕುಸಿದು ಕೂತು ಅಳುವಷ್ಟು ಅಳುವು ಏರಿ ಬಂದಿತ್ತು. ಆದರೂ ಅದನ್ನು ನುಂಗಿಕೊಂಡವಳೇ ನೀವೂ ಎಷ್ಟೂಂತ ಆ ಎಳೆಮಗುವಿನ ತಲೆಗೆ ಭಾರ ಹೊರಿಸ್ತೀರಿ ಮಾರಾಯ್ರೆ? ಅವನು ಎಷ್ಟು ಹೊತ್ತು ಕೊಳ್ಳಬಹುದು ಅಂತ ನೋಡಿಕೊಂಡು ಹೊರಿಸ್ಬೇಕಲ್ವಾ... ನಾವು ಅವ್ನ ಲೆಕ್ಕ ಎಷ್ಟು ಕಲೀತಾನೋ ಅಷ್ಟು ಕಲೀಲಿ... ಅವನೇ ಕಲೀಲಿ, ನೀವವನ ಬಿಟ್ಟು ಬಿಡಿ...'

'ನಡಿಯೇ... ನೀನು ನಿನ್ನ ಕೆಲ್ಸ ನೋಡು... ನಾನು ಸಯನ್ಸ್ ಗ್ರಾಜ್ಯುಯೇಟಾ... ನೀನಾ? ನಿಂಗಂತೂ ಕಾಲೇಜು ಮೆಟ್ಟಿಲು ಪೂರ್ತಿ ಹತ್ತಿಕ್ಕಾಗಿಲ್ಲ; ನಿಂಗೆ ಹತ್ತಿಕ್ಕಾಗದ್ದಕ್ಕೆ ನಂಗೆ ಗಂಟು ಹಾಕಿ ಕಳಿಸಿದ್ರು... ನಿನ್ನಪ್ಪ...'

'ಗಂಟು ಹಾಕಿದ್ದು?...' ಎಂಬ ಎರಡು ಪದ ಕೇಳಿ ಕುಮುದಳಿಗೆ ಉರಿದು ಹೋಯ್ತು. 'ಆರು ಲಕ್ಷ ಇಡುಗಂಟಿನ ಜೊತೆಗೇ ನನ್ನನ್ನು ನಮ್ಮಪ್ಪ ನಿಮಗೆ ಗಂಟು ಹಾಕಿದ್ದು... ಅಂತ ನಿಮ್ಗೆ ನೆನಪಿರ್ಲಿ...'

ಇವರಿಬ್ಬರ ವಾದ—ವಾದದ ಗದ್ದಲಕ್ಕೆ, ಜ್ವರದ ಮಂಪರಲ್ಲಿದ್ದ ಕೌಶಿಕ ದಡಕ್ಕನೆ ಎದ್ದು ಕೂತವನೇ... 'ಫೋರ್ ತ್ರಿ ಝರ್ ನೈನ್' ಎಂದಂದು ಬಿಟ್ಟು ಮತ್ತೆ ಮುಲುಗುತ್ತಾ ಮಲಗಿಕೊಂಡ. ಆ 'ನೈನ್' ನಂಬರ್ ಅಕ್ಷಯಕುಮಾರನನ್ನು ಮತ್ತೆ ಸಿಡಿಮಿಡಿಗೊಳಿಸಿತ್ತು. ಕುಮುದ ತಟ್ಟನೆ ಮಗನ ಪಕ್ಕಕ್ಕೆ ಹೋಗಿ—

'ಹೌದಪ್ಪ... ಹೌದು... ನೈನ್... ನೈನ್... ರೈಟ್' ಎಂದು ಆತನನ್ನು ತಟ್ಟ ತೊಡಗಿದ್ದಳು. ಅಸಹನೆಯಿಂದ ಸಿಡಿಮಿಡಿಗೊಂಡ ಅಕ್ಷಯಕುಮಾರ ಕೈಯಲ್ಲಿದ್ದ ಕಾಫಿಯ ಖಾಲಿ ಲೋಟವನ್ನು ಅಲ್ಲೇ ಇದ್ದ ಟೀಪಾಯ್‌ಗೆ ಕುಕ್ಕಿ, ಮುಖ ಊದಿಸಿಕೊಂಡು ಟೀವಿ ನೋಡತೊಡಗಿದ್ದ.

ಅಷ್ಟರಲ್ಲಿ ಜ್ವರದ ಅರೆಮಂಪರಿನಲ್ಲಿದ್ದ ಕೌಶಿಕ ಮತ್ತೊಮ್ಮೆ ಎದ್ದು ಕೂತು, 'ಇಲ್ಲ ಮಗ್ಗಿ ಕಲಿಯಲ್ಲ ನಾನು ಬಂಡೀಪುರಕ್ಕೆ ಹೋಗ್ತೀನಿ...' ಎಂದು ಹೇಳಿ ಮತ್ತೇ ಮಲಗಿಕೊಂಡ. ಮಗುವಿನ ಜ್ವರ ಕ್ಷಣದಿಂದ ಕ್ಷಣಕ್ಕೆ ಏರುತ್ತಿತ್ತು. ಊಟ ಮಾಡದೆ ಹಾಲಿನಲ್ಲಿದ್ದ ದಿವಾನದಲ್ಲಿ ಮಲಗಿದ್ದ ಗಂಡನನ್ನು 'ಬನ್ನಿ, ಊಟ ಮಾಡಿ ಬನ್ನಿ... ಒಳಗೆ ಬಂದು ಮಲಗಿಕೊಳ್ಳಿ' ಎಂದು ಕುಮುದ ಹೇಳಿದಾಗ ಆತ, 'ನಂಗೇನು ಬೇಡ... ನಡಿ ನೀನು' ಎಂದು ದುಮುಗುಡುತ್ತಾ ಹೇಳಿ ಅಲ್ಲೇ ಮುದುರಿಕೊಂಡ.

ಕುಮುದಳೂ ಊಟ ಮಾಡದೆ ಮಗುವಿನ ಪಕ್ಕದಲ್ಲೇ ಉರುಳಿಕೊಂಡಳು. ಆಕೆಗೆ ನಿದ್ದೆ ಎಂಬುದು ಕಣ್ಣತ್ತ ಸುಳಿಯಲಿಲ್ಲ. ಮಧ್ಯರಾತ್ರಿ ಎದ್ದು ಮಗುವಿನ ಹಣೆ – ಎದೆ ಮುಟ್ಟಿ ನೋಡಿದಳು. ಮಗುವಿನ ಜ್ವರ ಇನ್ನಷ್ಟು ಏರಿದೆ ! ಮಗು ಆ ಜ್ವರದಲ್ಲೇ ಮತ್ತೊಮ್ಮೆ ಎದ್ದು ಕೂತು... 'ಮಗ್ಗಿ ಪುಸ್ತಕ ಎಲ್ಲಮ್ಮಾ?...' ಎಂದು ಕೇಳಿ ಆಕೆಯ ತೊಡೆಯ ಮೇಲೆಯೇ ಮತ್ತೆ ಮುದುರಿ ಮಲಗಿತ್ತು. ಕುಮುದ 'ಮಗುವಿಗೇನೂ ಆಗದಿರಲಿ' ಎಂದ ಕಟೀಲಿನ ಅಮ್ಮನಿಗೆ ಹೂವಿನ ಪೂಜೆ ಹೇಳಿ... ಕಣ್ಣೆವೆ ಮುಚ್ಚದೆ, ಮತ್ತೊಮ್ಮೆ ಜ್ವರದ ಸಿರಪ್ ಹಾಕಿ ಮಗನ ಪಕ್ಕವೇ ಕುಳಿತುಕೊಂಡಳು.

ಮರುದಿನ ಮುಂಜಾನೆಗೆ ಕುಮುದ ಅಲ್ಲೇ ಕೂತಲ್ಲೇ ಮಂಚದ ಅಟ್ಟೆಗೆ ಒರಗಿ ಹಾಗೇ ನಿದ್ದೆಗೆ ಜಾರಿದ್ದಳು. ಹೊರಗೆ ಯಾರೋ ಬಾಗಿಲು ಬಡಿದ ಸದ್ದು. ಹೊರಗೆ ಹಾಲ್‌ನಲ್ಲಿ ಮಲಗಿದ್ದ